

ಮದುವೆಗೆ ಮುಂಚೆ ಹೆಣ್ಣು-ಗಂಡು ಹತ್ತಿರವಾಗಿದ್ದಾರೆಯೇ ಇಲ್ಲವೆ ಎನ್ನುವುದು ದಾಂಪತ್ಯದ ಭವಿಷ್ಯದತ್ತ ಬೆಳಕು ಚೆಲ್ಲುತ್ತದೆ.

ಡಾ.ವಿನೋದ ಛೆಬ್ಬಿ

# 110: ವ್ಯವಸ್ಥೆಯ ಬಲಿಪಶು-1

ಈ ಸಲದಿಂದ ನಿಮಗಾಗಿ ಹೊಸ ಅಧ್ಯಾಯ ಆರಂಭಿಸುತ್ತಿದ್ದೇನೆ. ಓದುಗರಾದ ನಿಮ್ಮಿಂದ ಬಂದ ದಾಂಪತ್ಯ ಸಮಸ್ಯೆಗಳಿಗೆ ಪರಿಹಾರ ನೀಡುವ ಪ್ರಯತ್ನಕ್ಕೆ ಹೊರಟಿದ್ದೇನೆ. ಇದು ಕೇವಲ ಪ್ರಶ್ನೋತ್ತರದ ಅಂಕಣವಾಗದಿರಲಿ ಎನ್ನುವ ಉದ್ದೇಶದಿಂದ ಸಮಸ್ಯೆಗಳ ಹಿಂದಿರುವ ಮಾನಸಿಕ, ಭಾವನಾತ್ಮಕ, ಪಾರಸ್ಪರಿಕ ಹಾಗೂ ಕೌಟುಂಬಿಕ ಪದರಗಳನ್ನು ಬಿಡಿಸಿಡಬೇಕೆಂದಿದ್ದೇನೆ. ಕೊನೆಗೆ ಸಮಸ್ಯೆಯ ಕುರಿತು ಜಿಜ್ಞಾಸೆ, ವಿಚಾರ ವಿಮರ್ಶೆಯನ್ನು ಸೇರಿಸಲಿದ್ದೇನೆ. ಅಷ್ಟರಲ್ಲೇ ನಿಮ್ಮಿಂದ ಸೂಕ್ತ ಅಭಿಪ್ರಾಯಗಳು ಬಂದಲ್ಲಿ ಅದನ್ನೂ ಸೇರಿಸಲಿದ್ದೇನೆ. ಹಾಗಾಗಿ ಪ್ರತಿ ಪ್ರಕರಣವು 2-3 ಭಾಗಗಳಿಗೆ ವಿಸ್ತರಿಸಲಿದೆ.

ಮೊದಲ ಪ್ರಕರಣವು ಒಬ್ಬ ಯುವಕನಿಗೆ ಸಂಬಂಧಪಟ್ಟಿದ್ದು, ಅದರ ಮೊದಲ ಭಾಗ ಹೀಗಿದೆ:

ಗೌಪ್ಯವನ್ನು ಕಾಪಾಡುವ ಉದ್ದೇಶದಿಂದ ಇವನನ್ನು 'ಯುವಕ' ಎಂದೇ ಹೆಸರಿಸೋಣ. ಇಂಗ್ಲಿಷಿನಲ್ಲಿ ಬರೆದ ಇವನ ಪತ್ರದ ಸಾರಾಂಶ ಹೀಗಿದೆ: ಯುವಕ, 32 ವರ್ಷ. ಸುಶಿಕ್ಷಿತ, ಉತ್ತಮ ಉದ್ಯೋಗದಲ್ಲಿದ್ದೇನೆ. ನಿಮಿರುದೌರ್ಬಲ್ಯ ಇದೆ. ಹಿರಿಯರು ತೋರಿಸಿದ ಹುಡುಗಿಯನ್ನು ಒಪ್ಪಿ ಮದುವೆಯಾಗಿ ಮೂರು ತಿಂಗಳಾಗಿದೆ. ಜೊತೆಗಿದ್ದ ಒಂದು ತಿಂಗಳ ಅವಧಿಯಲ್ಲಿ 3-4 ಸಲ ಸಂಭೋಗಕ್ಕೆ ಯತ್ನಿಸಿದರೂ ಪ್ರವೇಶ ಸಾಧ್ಯವಾಗಿಲ್ಲ. ನಂತರ ಹೆಂಡತಿ ತವರಿಗೆ ಮರಳಿದ್ದಾಳೆ. ಅಲ್ಲಿಂದ ಮಾವ ಹೇಳಿಕಳಿಸಿದ್ದಾನೆ: 'ಸಂಭೋಗ ಆಗಿಲ್ಲವಂತೆ. ಹಾಗಾಗಿ ಇಲ್ಲೇ ಬಂದಿದ್ದು ಸಮಸ್ಯೆ ಬಗೆಹರಿಸಿಕೊಂಡು, ಹೆಂಡತಿಯನ್ನು ಕರಕೊಂಡು ಹೋಗು.' ತುಂಬಾ ಗಾಬರಿಯಾಯಿತು. ಪ್ರಸಿದ್ಧ ಲೈಂಗಿಕ ತಜ್ಞರನ್ನು ಕಂಡೆ. ಅವರು ರಕ್ತಪರೀಕ್ಷೆ, ಶಿಶ್ನದ ಸ್ಕ್ಯಾನ್ ಮಾಡಿ 30 ಮಾತ್ರೆ ಕೊಟ್ಟರು. ಮಾತ್ರೆ ಮುಗಿದರೂ ಸುಧಾರಣೆ ಇಲ್ಲ.

ಅವನು ಲಗತ್ತಿಸಿದ ವೈದ್ಯಕೀಯ ವರದಿಯ ಪ್ರತಿಗಳನ್ನು ನೋಡಿದೆ. ಎಲ್ಲವೂ ಸರಿಯಾಗಿತ್ತು. ಯುವಕನ ಸಮಸ್ಯೆಯು ಶಾರೀರಿಕವಲ್ಲ ಎಂದು ಮೇಲುನೋಟಕ್ಕೆ ಎದ್ದುಕಂಡಿತು. ಅವನು ಕೊಟ್ಟ ದೂರವಾಣಿಯನ್ನು ಸಂಪರ್ಕಿಸಿದಾಗ ಇನ್ನಷ್ಟು ವಿವರಗಳು ದೊರಕಿದುವು. ಹುಡುಗಿ ಯಾಕೆ ಇಷ್ಟವಾದಳು? ಆಕೆ ಓದಿದವಳು, ಚೆನ್ನಾಗಿದ್ದಾಳೆ, ಹಿರಿಯರು ಒಪ್ಪಿದ್ದಾರೆ ಎಂದು ಇವನೂ ಒಪ್ಪಿದನಂತೆ. ವಿವಾಹಪೂರ್ವ ಮೂರು ತಿಂಗಳ ಅವಧಿಯಲ್ಲಿ ಇಬ್ಬರ ನಡುವೆ ಏನೇನು ನಡೆಯಿತು? ಇಬ್ಬರೂ ತಮ್ಮ ಕೆಲಸಗಳ ಬಗೆಗೆ ವ್ಯಾವಹಾರಿಕವಾಗಿ ಮಾತಾಡಿಕೊಂಡಿದ್ದರು. ಎಲ್ಲಾದರೂ ಪ್ರಣಯಭಾವವಿತ್ತೆ? ಹಾಗೇನಿಲ್ಲ. ಒಂದೆರಡು ಸಲ ಇವನು ಲವ್, ಕಿಸ್ ಎಂದು ಮಾತಾಡಿದಾಗ ಹುಡುಗಿ ಸ್ಪಂದಿಸದೆ ಸುಮ್ಮನಿದ್ದಳಂತೆ. ಇದು ಇವನಿಗೆ ಯೋಚಿಸುವಂಥ ವಿಷಯ ಅನ್ನಿಸಲಿಲ್ಲವೆ? ನಿಜ, ಸ್ವಲ್ಪ ನಿರಾಸೆಯಾಯಿತು. ಮದುವೆಯ ನಂತರ ಸರಿಹೊಂದುತ್ತಾಳೆಂದು ಅಂದುಕೊಂಡನಂತೆ. ಮದುವೆಗೆ ಮುಂಚೆ ಒಟ್ಟಿಗೆ ಸಮಯ ಕಳೆದಿದ್ದರೆ? ಇಬ್ಬರೂ ಬೇರೆ ಬೇರೆ ಊರುಗಳಲ್ಲಿದ್ದರು. ಒಂದೇ ಒಂದು ಸಲ ಬಟ್ಟೆ ಖರೀದಿಗೆಂದು ಬಂದಾಗ ಪೇಟೆಯಲ್ಲಿ ಭೇಟಿಯಾಗಿ ಕಾಫಿ ಕುಡಿದಿದ್ದಷ್ಟೆ.

ಅವರ ಕಾಮಕೂಟದ ಬಗೆಗೆ ಕೇಳಿದಾಗ ಯುವಕ ಹೀಗೆ ಹೇಳಿದ: ಮೊದಲ ರಾತ್ರಿಯಿಂದ ಹಿಡಿದು ಮಧುಚಂದ್ರದ ತನಕ ಹೆಂಡತಿ ಕಾಮಕ್ರಿಯೆಯಲ್ಲಿ ಯಾವೊತ್ತೂ ಸರಿಯಾಗಿ ಸ್ಪಂದಿಸಿಲ್ಲ. ಇವನು ತುಟಿಗೆ ತುಟಿ ಸೇರಿಸಿ ಹೀರುತ್ತಿದ್ದರೂ ಆಕೆ ತಣ್ಣಗಿರುತ್ತಾಳೆ. ಇವನು ಅಷ್ಟೊಂದು ಆವೇಶದಿಂದ ಆಕೆಯ ಮೈಯನ್ನು ತಡಕಾಡಿದರೂ ಆಕೆ ಇವನನ್ನು ಸರಿಯಾಗಿ ತಬ್ಬಿಕೊಳ್ಳುವುದೂ ಇಲ್ಲ. ಒತ್ತಾಯಿಸಿದರೆ ಸ್ವಲ್ಪ ಹಿಡಿದುಕೊಳ್ಳುತ್ತಾಳಷ್ಟೆ – ಅದರಲ್ಲೂ ಬಿಗಿ ಇರುವುದಿಲ್ಲ. ಇವನು ತಾನೇ ಉದ್ರೇಕವನ್ನು ತಂದುಕೊಂಡು ಪ್ರವೇಶಕ್ಕೆ ಹೋಗುವಾಗ ಆಕೆ ಮೈ ಸೆಟೆಸುತ್ತಾಳೆ. ಯಾಕೆಂದು ಕೇಳಿದರೆ ಸಂಕೋಚ ಎನ್ನುತ್ತಾಳೆ. ಇವನು ಒಳಹೋಗಲು ಎಷ್ಟೇ ಭಾರಹಾಕಿದರೂ ಒಂದಿಂಚೂ ಇಳಿಯಲಾಗುವುದಿಲ್ಲ. ಹತಾಶೆಯಿಂದ ಮೆತ್ತಗಾಗಿ ಪಕ್ಕಕ್ಕೆ ಜರುಗುತ್ತಾನೆ.

ಹೆಂಡತಿಯ ತಟಸ್ಥ ಧೋರಣೆಯ ಬಗೆಗೆ ಯುವಕ ವಿಚಾರಿಸಿದನೆ? ಹೌದು. ಆಗ ಮುಖ್ಯವಾದ ವಿಷಯ ಹೊರಬಂದಿದೆ. ಮುಹೂರ್ತಕ್ಕಿಂತ ಎರಡು ದಿನ ಮುಂಚೆ ಇವಳು ಮದುವೆ ನಿಲ್ಲಿಸಲು ತನ್ನ ಚಿಕ್ಕಮ್ಮನಿಗೆ ಕೇಳಿಕೊಂಡಳಂತೆ. ಅವಳನ್ನು ಯಾರೂ ಲೆಕ್ಕಕ್ಕೆ ತಾರದೆ, ಬಯ್ದು ಬುದ್ಧಿಹೇಳಿ ಮದುವೆ ಮುಗಿಸಿದ್ದಾರೆ.

ಹೆಂಡತಿಯ ಸ್ವಭಾವ ಹೇಗೆ? ಜೊತೆಗಿದ್ದ ಒಂದು ತಿಂಗಳಲ್ಲಿ ಹೆಚ್ಚೇನೂ ಪರಿಚಯವಾಗಿಲ್ಲ. ಆಕೆ ಜಗಳಗಂಟಿಯೇನಲ್ಲ. ವಿಶೇಷ ಹವ್ಯಾಸಗಳಿಲ್ಲ. ಇವನೊಡನೆ ಅಲ್ಪಸ್ವಲ್ಪ ಮಾತಾಡುತ್ತಾಳೆ. ಹಾಗೆಂದು ತನ್ನ ಬೇಕುಬೇಡಗಳನ್ನು ಸ್ಪಷ್ಟವಾಗಿ ಹಂಚಿಕೊಳ್ಳುವುದಿಲ್ಲ. ಸ್ವಲ್ಪದರಲ್ಲೇ ಮಾತು ಮುಗಿಸುತ್ತಾಳೆ. ಹಾಗಾಗಿ ಅವಳನ್ನು ಅರ್ಥಮಾಡಿಕೊಳ್ಳಲು ಇವನಿಗೆ ಆಗಿಲ್ಲ. ಇವನ ಅಂದಾಜು ಏನೆಂದರೆ, ತಾನು ಸಂಭೋಗ ಮಾಡದಿರುವುದು ಅವಳಿಗೆ ಅತೃಪ್ತಿಯೆನ್ನಿಸಿದೆ. ಅದಕ್ಕೇ ಆಕೆ ಇವನ ಹತ್ತಿರವಾಗಲು ಮನಸ್ಸುಮಾಡಿಲ್ಲ. ಒಂದುಸಲ ಸಂಭೋಗ ನಡೆದರೆ ತನ್ನನ್ನು ಪ್ರೀತಿಸಲು ಶುರುಮಾಡುತ್ತಾಳೆ ಎಂದು ಭರವಸೆ ಇಟ್ಟುಕೊಂಡಿದ್ದಾನೆ.

ಮದುವೆಯಾಗಿ ಒಂದು ತಿಂಗಳು ಜತೆಗಿದ್ದೂ ಆಕೆ ಪ್ರೀತಿಯನ್ನು ತೋರ್ಪಡಿಸಿಲ್ಲ ಎಂದರೆ ಅರ್ಥವೇನು? ಅದಕ್ಕೆ ಅವನ ಉತ್ತರ: ಮದುವೆಗಿಂತ ಮುಂಚೆ ಒಬ್ಬನನ್ನು ಪ್ರೀತಿಸಿದ್ದಳಂತೆ. ಆದರೆ ಅವನು ಬೇರೆ ಜಾತಿಯವನಾದುದರಿಂದ ಅಮ್ಮ-ಅಪ್ಪ ಒಪ್ಪಲಿಲ್ಲವಂತೆ. ಅವನಿನ್ನೂ ಮನಸ್ಸಿನಲ್ಲಿದ್ದಾನೆಯೇ ಎಂದರೆ ಹಾಗೇನಿಲ್ಲ ಎಂದು ಉತ್ತರಿಸಿದ್ದಾಳೆ. ಹಾಗಿದ್ದರೂ ಆಕೆ ಅವನೊಂದಿಗೆ ಗಂಟೆಗಟ್ಟಲೆ ಫೋನಿನಲ್ಲಿ ಮಾತಾಡುವುದನ್ನು ಯುವಕ ಗಮನಿಸಿದ್ದಾನೆ. ಅದಾದಮೇಲೆ ತನ್ನ ಸಂಭೋಗದ ಯತ್ನವನ್ನು ಮುಂದುವರಿಸಿದ್ದಾನೆ.

ಹಾಗಾದರೆ ನನ್ನಿಂದ ಯುವಕನಿಗೆ ಏನು ಸಹಾಯ ಆಗಬೇಕು? ಅವನು ಹೇಳಿದ್ದು: ನನಗೆ ಸರಿಯಾಗಿ ಉದ್ರೇಕವಾಗಲು ಸಹಾಯ ಮಾಡಿ. ಆಕೆಗೆ ಒಂದೆರಡು ಸಲ ಸಂಭೋಗಸುಖ ಕೊಟ್ಟರೆ ಸಾಕು, ನನ್ನವಳಾಗಿಬಿಡುತ್ತಾಳೆ.

ಇಷ್ಟೊಂದು ನಂಬಿಕೆಗೆ ಏನು ಕಾರಣ ಎಂದರೆ ಯುವಕ ಇತ್ತೀಚಿನ ಸುದ್ದಿಯನ್ನು ಹೊರಗೆಡುಹಿದ. ಹೆಂಡತಿಯು ಇಲ್ಲಿಂದ ಹೋದ ನಂತರ ತನ್ನ ಪ್ರೇಮಿಯ ವಿಷಯವನ್ನು ಹೆತ್ತವರಿಗೆ ತಿಳಿಸಿದ್ದಾಳೆ. ಅವರು ಪ್ರೇಮಿಯ ತಾಯ್ತಂದೆಯರನ್ನು ಭೇಟಿಯಾಗಿ ವಿಷಯವನ್ನು ತಿಳಿಸಿ, ಮದುವೆಗೆ ಕೇಳಿದ್ದಾರೆ. ಸಂಬಂಧ ಆಗಬೇಕಾದ ಹೆಣ್ಣು ವಿವಾಹಿತಳೆಂದು ಗೊತ್ತಾದಾಗ ಅವರು ಹೌಹಾರಿ ಮುಂದೆ ಮಾತಾಡಗೊಡದೆ ಸಾಗಹಾಕಿದರಂತೆ. ಇದನ್ನೆಲ್ಲ ಆಕೆಯೇ ಇವನಿಗೆ ಫೋನ್‌ನಲ್ಲಿ ಹೇಳಿದಳಂತೆ.

ಮುಂದೇನಾಯಿತು ಎಂಬುದನ್ನು ಇನ್ನೆರಡು ವಾರ ಓದಲಿದ್ದೀರಿ.

★ ದಾಂಪತ್ಯದಲ್ಲಿ ಸಮಸ್ಯೆಗಳು ಹೇಗೆ ಉಂಟಾಗುತ್ತವೆ, ಈ ಸಮಸ್ಯೆಗಳ ಹುಟ್ಟಿನಲ್ಲಿ ಅವರವರ ತಾಯ್ತಂದೆಯರ ಪಾತ್ರವೆಷ್ಟಿದೆ, ಹಾಗೂ ದಾಂಪತ್ಯದ ಸಮಸ್ಯೆಗಳನ್ನು ಹೇಗೆ ಬಗೆಹರಿಸಲಾಗುತ್ತದೆ ಎನ್ನುವುದರ ಕಲ್ಪನೆಯನ್ನು ಇಲ್ಲಿಯ ತನಕ ಕೊಟ್ಟಿದ್ದೇವೆ. ಇನ್ನು ಮುಂದಿನ ಕೆಲವು ಕಂತುಗಳಲ್ಲಿ ನಿಮ್ಮಲ್ಲಿ ಕೆಲವರಿಂದ ಬಂದ ಸಮಸ್ಯೆಗಳ ಬಗೆಗೆ ಉತ್ತರಿಸುವ ಪ್ರಯತ್ನ ಮಾಡುತ್ತೇವೆ. ಆಸಕ್ತರು ತಮ್ಮ ದಾಂಪತ್ಯ ಸಮಸ್ಯೆಗಳ ಬಗೆಗೆ 'ಸುಧಾ' ಪತ್ರಿಕೆ ವಿಳಾಸಕ್ಕೆ ಬರೆದು ಕಳುಹಿಸಬಹುದು.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. **ಲೈಂಗಿಕ ಸಮಸ್ಯೆಗಳಿಗೆ: 8050255229** (3ರಿಂದ 5ರ ತನಕ); **ದಾಂಪತ್ಯ ಸಮಸ್ಯೆಗಳಿಗೆ: 8494944888** (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ **ವಿಳಾಸ: www.medisex.org**